



ಡಾ. ಎಸ್. ರಾಮಮೂರ್ತಿ

# 23-2-2017ರಿಂದ 1-3-2017ರವರೆಗೆ



**ಮೇಷ**

ವಾರದ ಮಧ್ಯ ಭಾಗದವರೆಗೂ ಶಾಂತಿ ಸಮಾಧಾನ. ನಿರೀಕ್ಷೆಯಂತೆ ಕಾರ್ಯಸಾಧನೆ. ವ್ಯಾಪಾರ ವ್ಯವಹಾರಗಳಲ್ಲಿ ಸೂಕ್ತ ಲಾಭ. ಮಕ್ಕಳಿಂದ ಸಹಾಯ. ಬರಬೇಕಾದ ಹಣ ಬರುವುದು. ಕೋಪ ಕಡಿಮೆಯಾಗುವುದು. ಪತ್ರಾಗಮನ, ವಾರಾಂತ್ಯ ಸೋಮಾರಿತನ, ಸಮಯಕ್ಕೆ ಸರಿಯಾಗಿ ಉದ್ಯೋಗಕ್ಕೆ ಹಾಜರಾಗಲು ಅಡೆತಡೆ. ಶುಭ ದಿನ: 25; ದುರ್ಗಾ ಮತ್ತು ಶಿವ ಅಷ್ಟೋತ್ತರ ಪಠಿಸಿ



**ವೃಷಭ**

ಕುಟುಂಬ ಸದಸ್ಯರಲ್ಲಿ ಒಮ್ಮತ ಮೂಡುವುದು. ದೀರ್ಘಕಾಲದ ಮಿತ್ರರ ಭೇಟಿ. ಉದ್ಯೋಗ ವೃತ್ತಿಗಳಲ್ಲಿ ಪ್ರಗತಿ. ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭ ದೊರಕುವುದು. ಲೆಕ್ಕಪತ್ರಗಳಲ್ಲಿನ ಅನುಮಾನ ಬಗೆಹರಿಯುವುದು. ವಾದ ವಿವಾದಗಳಲ್ಲಿ ವಿರೋಧಿಗಳಿಗೆ ಹಿನ್ನಡೆಯಾಗುವುದು. ಪತ್ರಾಗಮನದಿಂದ ಸಂತಸ. ಶುಭ ದಿನ: 27; ಗಣೇಶ ಮತ್ತು ಶಿವ ಅಷ್ಟೋತ್ತರ ಪಠಿಸಿ



**ಮಿಥುನ**

ವಾರದ ಆರಂಭದಲ್ಲಿ ಏನಾದರೊಂದು ಸಮಸ್ಯೆ. ಆರೋಗ್ಯ ವ್ಯತ್ಯಯ. ಅಕಾಲ ಭೋಜನ. ವೃತ್ತಿ ವ್ಯವಹಾರಗಳಲ್ಲಿ ಒತ್ತಡ, ವಿಪರೀತ ಶ್ರಮ. ವಾರದ ಮಧ್ಯಭಾಗದಿಂದ ಚೇತರಿಕೆ. ಮನಸ್ಸು ಹಗುರವಾಗುವುದು. ಉದ್ಯೋಗದಲ್ಲಿ ಪ್ರಗತಿ. ಅಧಿಕಾರಿ ವರ್ಗದವರಿಂದ ಮಾರ್ಗದರ್ಶನ. ಲೇವಾದೇವಿಗಳಲ್ಲಿ ಊನ. ಆಪ್ತರೊಡನೆ ಚರ್ಚೆ. ಶುಭ ದಿನ: 27; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ



**ಕಟಕ**

ವಾರದ ಆರಂಭದಲ್ಲಿ ಸಮಾಧಾನ. ಕೆಲಸ ಕಾರ್ಯಗಳಲ್ಲಿ ಯಶಸ್ಸು. ವ್ಯಾಪಾರದಲ್ಲಿ ಲಾಭ. ಪ್ರಯಾಣ ಸೌಖ್ಯ. ಹಿತಕರ ಘಟನೆಗಳು. ವಾರದ ಮಧ್ಯಭಾಗದಲ್ಲಿ ಒತ್ತಡ. ಅನಾವಶ್ಯಕ ತಿರುಗಾಟ. ಮೋಸ ಹೋಗುವ ಸಂಭವ. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ವಿರೋಧಿಗಳಿಂದ ಉಪದ್ರವ. ಅಧಿಕ ಖರ್ಚು. ಶುಭ ದಿನ: 24; ದುರ್ಗಾ ಮತ್ತು ದತ್ತಾತ್ರೇಯ ಅಷ್ಟೋತ್ತರ ಪಠಿಸಿ



**ಸಿಂಹ**

ವಾರದ ಮಧ್ಯಭಾಗದವರೆಗೂ ಅನುಕೂಲ. ನಿರೀಕ್ಷೆಯಂತೆ ವ್ಯವಹಾರಗಳಲ್ಲಿ ಲಾಭ. ಉದ್ಯೋಗದಲ್ಲಿ ಅಧಿಕಾರಿ ವರ್ಗದ ಪ್ರಶಂಸೆ. ಕುಟುಂಬ ಸದಸ್ಯರಿಂದ ಸಹಕಾರ. ಗೃಹ ನವೀಕರಣ, ಚಿಂತನೆ. ಗುರು ಹಿರಿಯರೊಂದಿಗೆ ಸಮಾಲೋಚನೆ. ವಾರಾಂತ್ಯ ಒತ್ತಡ. ಮಕ್ಕಳ ಮೇಲೆ ಕೋಪ ತಾಪ. ಕಾರ್ಯ ಹಿನ್ನಡೆ. ಅನಾರೋಗ್ಯ. ಶುಭ ದಿನ: 25; ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಕನ್ಯಾ**

ಉದ್ಯೋಗ ವೃತ್ತಿ ವ್ಯವಹಾರಗಳಲ್ಲಿ ಮನಃಶಾಂತಿ. ಕ್ರಯ ವಿಕ್ರಯಗಳಲ್ಲಿ ಪೈಪೋಟಿಯಿದ್ದರೂ ಲಾಭದ ಕೊರತೆಯಿಲ್ಲ. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ತಕರಾರುಗಳು ಬಗೆಹರಿಯುವುದು. ಖರ್ಚು ನಿಯಂತ್ರಣಕ್ಕೆ ಬರುವುದು. ವಿರೋಧಿಗಳು ತಟಸ್ಥರಾಗುವುದು. ವಿದೇಶಿ ವ್ಯವಹಾರಗಳಲ್ಲಿ ಮುನ್ನಡೆ. ಶುಭ ದಿನ: 27; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ



**ತುಲಾ**

ವಾರದ ಆರಂಭದಲ್ಲಿ ಬೇಸರ. ಕೆಲಸ ಕಾರ್ಯಗಳಲ್ಲಿ ತಪ್ಪುಗಳಾಗುವಿಕೆ. ಲೇವಾದೇವಿಗಳಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಅನುಕೂಲ. ಧೈರ್ಯ ಪ್ರಾಪ್ತಿ. ಹಿತಕರ ಭೋಜನ. ವೃತ್ತಿ ಪ್ರವೃತ್ತಿಗಳಲ್ಲಿ ಸಫಲತೆ. ವಾಹನ ಸೌಖ್ಯ. ಕುಟುಂಬದ ಸದಸ್ಯರಲ್ಲಿ ಹೊಂದಾಣಿಕೆ. ಗೌರವ ಪ್ರಾಪ್ತಿ. ಶುಭ ದಿನ: 28; ಗಣೇಶ ಮತ್ತು ಶಿವ ಅಷ್ಟೋತ್ತರ ಪಠಿಸಿ



**ವೃಶ್ಚಿಕ**

ವಾರದ ಆರಂಭದಲ್ಲಿ ಧೈರ್ಯ. ಏಕಾಗ್ರತೆಯಿಂದ ಕೆಲಸ ಕಾರ್ಯಗಳನ್ನು ಮಾಡಿ ಸಫಲರಾಗುವಿಕೆ. ವ್ಯಾಪಾರದಲ್ಲಿ ಲಾಭ. ಆತ್ಮೀಯರಿಂದ ಸಹಾಯ. ವಾರದ ಮಧ್ಯಭಾಗದಲ್ಲಿ ಆತಂಕ. ಕೋಪದ ಮಾತುಗಳು. ವೃತ್ತಿ ಪ್ರವೃತ್ತಿಗಳಲ್ಲಿ ಸಮಸ್ಯೆ. ಅಹಿತ ಸಂದೇಶ. ವಾರಾಂತ್ಯ ಸಮಾಧಾನ. ಶುಭ ದಿನ: 24; ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಧನಸ್ಸು**

ಕೆಲಸ ಕಾರ್ಯಗಳು ನಿರೀಕ್ಷೆಯಂತೆ ನಡೆಯುವುದು. ಕ್ರಯ ವಿಕ್ರಯ ಒಪ್ಪಂದ ವ್ಯವಹಾರಗಳಲ್ಲಿ ಲಾಭ ಹೆಚ್ಚುವುದು. ಸಾಧು ಸಂತರ ದರ್ಶನದಿಂದ ಮನಃಶಾಂತಿ. ಖರ್ಚು ನಿಯಂತ್ರಣಕ್ಕೆ ಬರುವುದು. ಅಧ್ಯಯನದಲ್ಲಿ ಆಸಕ್ತಿ ಉಂಟಾಗುವುದು. ಗಣ್ಯರ ಮಾರ್ಗದರ್ಶನದಿಂದ ತಕರಾರುಗಳು ಬಗೆಹರಿಯುವುದು. ಶುಭ ದಿನ: 27; ಶಿವ ಮತ್ತು ದುರ್ಗ ಅಷ್ಟೋತ್ತರ ಪಠಿಸಿ



**ಮಕರ**

ಕೆಲಸ ಕಾರ್ಯಗಳು ಸರಾಗವಾಗಿ ನಡೆದು ಮನಃಶಾಂತಿ ಹಾಗೂ ಧೈರ್ಯ ಉಂಟಾಗುವುದು. ವ್ಯಾಪಾರದಲ್ಲಿ ಒಪ್ಪಂದ ಏಜೆನ್ಸಿ ಕ್ರಿಯೆಗಳಲ್ಲಿ ನಿರೀಕ್ಷಿತ ಲಾಭ ಲಭಿಸುವುದು. ವಿರೋಧಿಗಳು ಹಿಂದೆ ಸರಿಯುವರು. ವಾದ ವಿವಾದಗಳಲ್ಲಿ ಜಯ ಪ್ರಾಪ್ತಿಯಾಗಿ ಗಣ್ಯರಿಂದ ಗೌರವ ದೊರಕುವುದು. ಕುಟುಂಬದಲ್ಲಿ ಒಮ್ಮತ. ಶುಭ ದಿನ: 27; ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ



**ಕುಂಭ**

ವಾರದ ಆರಂಭದಲ್ಲಿ ಒತ್ತಡ. ಹಿರಿಯರ ಮೇಲೆ ಸಿಟ್ಟು. ವೃತ್ತಿ ವ್ಯವಹಾರಗಳಲ್ಲಿ ಹಿನ್ನಡೆ. ಪೆಟ್ಟಾಗುವ ಸಂಭವ. ವಾರದ ಮಧ್ಯಭಾಗದಿಂದ ಸಮಾಧಾನ. ಹಿರಿಯರಿಂದ ಸಲಹೆ. ಉದ್ಯೋಗದಲ್ಲಿ ಮುನ್ನಡೆ. ಆರೋಗ್ಯ ಸುಧಾರಣೆ. ಲೇವಾ ದೇವಿಗಳಲ್ಲಿ ಲಾಭ. ಹಿತ ಸುದ್ದಿ. ಪ್ರಯಾಣ ಸೌಖ್ಯ. ಶುಭ ದಿನ: 27; ಗಣೇಶ ಮತ್ತು ಶಿವ ಅಷ್ಟೋತ್ತರ ಪಠಿಸಿ



**ಮೀನ**

ವಾರದ ಆರಂಭದಲ್ಲಿ ಸಂತಸ, ಸೌಖ್ಯ. ಕೆಲಸ ಕಾರ್ಯಗಳಲ್ಲಿ ಯಶಸ್ಸು. ಲೇವಾ ದೇವಿಗಳಲ್ಲಿ ಲಾಭ. ಆಪ್ತರ ಭೇಟಿ. ಪತ್ರಾಗಮನ. ವಾರದ ಮಧ್ಯಭಾಗದಲ್ಲಿ ಭಯ. ಅನಾವಶ್ಯಕ ತಿರುಗಾಟ. ವ್ಯಾಪಾರ ವೃತ್ತಿಗಳಲ್ಲಿ ಸಮಸ್ಯೆ. ಮಕ್ಕಳಿಂದ ಅಸಹಕಾರ. ಶತ್ರುಗಳಿಂದ ತೊಂದರೆ ಸಂಭವ. ವಾರಾಂತ್ಯ ಸುಧಾರಣೆ. ಶುಭ ದಿನ: 24; ದುರ್ಗಾ ಮತ್ತು ಶಿವ ಅಷ್ಟೋತ್ತರ ಪಠಿಸಿ